**ಸಾಕ್ಷಿಯನ್ನ ದಿನಾಂಕ 15-03-2019 ರಂದು ಸಾಕ್ಷಿಯನ್ನ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರಾದ ಶ್ರೀ ಆರ್. ಕೆ. ಹಿರೇಮಠರವರಿಂದ.**

ಚಾಸಾ-6 ರಿಂದ 8 ನನ್ನ ಖಾಸಾ ಸಹೋದರರು ಎಂದರೆ ಸರಿ. ನಾನು ಮತ್ತು ಚಾಸಾ-6 ರಿಂದ 8 ಖಾಯಂ ಆಗಿ ಕೊಳಕೂರು ಗ್ರಾಮದಲ್ಲಿ ವಾಸವಾಗಿದ್ದೇವೆ ಎಂದರೆ ಸರಿ. ಚಾಸಾ-9 ರಿಂದ 11 ಸಹ ನಮ್ಮ ಊರಿನವರು ಮತ್ತು ನಮ್ಮ ಜಾತಿಯವರು ಎಂದರೆ ಸರಿ. ನನ್ನ ಮತ್ತು ಚಾಸಾ-9 ರಿಂದ 11 ರವರ ನಡುವೆ ಸಂಬಂಧ ಚೆನ್ನಾಗಿದೆ ಎಂದರೆ ಸರಿ.

ನಿರ್ರಾಶ್ರಿತರ ಪ್ರಮಾಣ ಪತ್ರವನ್ನ ನೀಡುವುದಕ್ಕೆ ಮೊದಲು ಸಂಬಂಧಪಟ್ಟ ಅಧಿಕಾರಿಗಳು ಅಂದರೆ ತಹಸಿಲ್ದಾರರು ಕಾನೂನು ಪ್ರಕಾರ ಪ್ರಕ್ರಿಯೆಗಳನ್ನ ಪೂರ್ಣಗೊಳಿಸಿ ಸದರಿ ಪ್ರಮಾಣ ಪತ್ರ ನೀಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿಗಳು ಮತ್ತು ಅಧಿಕಾರಿಗಳು ನನಗಾಗಲಿ ಅಥವಾ ನನ್ನ ಕುಟಂಬದ ಯಾವುದೇ ಸದಸ್ಯರಿಗಾಗಲಿ ಯಾವುದೇ ರೀತಿ ಮೋಸ ಮಾಡಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ನನ್ನ ಸಂಬಂಧಿಕ ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಮತ್ತು ನನ್ನ ನಡುವೆ ಜಗಳ ಬಂದಿದ್ದರಿಂದ ಆತನ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಕನ್ನಡ ಭಾಷೆಯಲ್ಲಿ ಭಾಗಣ್ಣ ಎಂದು ಸಹಿ ಮಾಡಲು ಬರುತ್ತದೆ ಎಂದರೆ ಸರಿಯಲ್ಲ. ನನಗೆ ಕನ್ನಡ ಭಾಷೆಯಲ್ಲಿ ಭಾಗಣ್ಣ ಎಂದು ಸಹಿ ಮಾಡಲು ಬಂದರು ಸಹ ಬರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂಬರ್ 299 ರ ಮೇಲೆ 1 ನೇ ಅರೋಪಿಯಾದ ಸಿದ್ದಣ್ಣನಿಗೆ ಹಕ್ಕಿದೆ ಎಂದರೆ ಸರಿಯಲ್ಲ. ಆತನಿಗೆ ಸದರಿ ಜಮೀನಿನ ಮೇಲೆ ಹಕ್ಕಿದ್ದರು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಆರೋಪಿ ಪರ ವಕೀಲರಾದ ಶ್ರೀ ಬಿ. ಬಸ್ಸಣ್ಣರವರಿಂದ.**

2 ನೇ ಆರೋಪಿಯು 1 ನೇ ಆರೋಪಿ ಜೊತೆ ಸೇರಿ ಸುಳ್ಳು ದಾಖಲೆಗಳನ್ನ ಸೃಷ್ಟಿಸಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ.ಇದೆ.**

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು,**

**ಜೇವರ್ಗಿ**